# ಮೈಸೂರು ಸಂಸ್ಥಾನದಲ್ಲಿ ಇನ್‌ಫ್ಲುಯೆಂಜಾ ಸಾಂಕ್ರಾಮಿಕ ರೋಗ ಮತ್ತು ಸರ್ಕಾರ ಕೈಗೊಂಡ ಕ್ರಮಗಳು: ಒಂದು ಅವಲೋಕನ

**ಲಕ್ಷ್ಮೀರಂಗಯ್ಯ ಕೆ.**
ಸಹ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ತಿಪಟೂರು.

**Article Link: https://aksharasurya.com/2024/04/lakshmirangaiah-k.php**

**DOI: https://doi.org/10.5281/zenodo.10929628**

## ABSTRACT:

ಪ್ರಸ್ತುತ ಸಂಶೋಧನಾ ಲೇಖನವು ಮೊದಲ ಮಹಾಯುದ್ಧದ ಅಂತ್ಯದಲ್ಲಿ ವಿಶ್ವದಾದ್ಯಂತ ಹರಡಿದ್ದ ಇನ್‌ಫ್ಲುಯೆಂಜಾ ಸಾಂಕ್ರಾಮಿಕರೋಗವು ಸೈನಿಕರು ಮತ್ತು ವರ್ತಕರ ಮೂಲಕ ಕಲ್ಕತ್ತ ಮತ್ತು ಬಾಂಬೆಗೆ ಬಂದು ನಂತರ ದೇಶದಾದ್ಯಂತ ಹಬ್ಬಿ ಮೈಸೂರುಸಂಸ್ಥಾನದ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಹರಡಿ ಹೇಗೆ ಇಡೀ ಸಂಸ್ಥಾನದಾದ್ಯಂತ ಜನತೆಯನ್ನು ಬಾಧಿಸಿತು, ಜನರು ಅನುಭವಿಸಿದ ಸಾವು–ನೋವುಗಳು, ಸರ್ಕಾರ ರೋಗ ನಿವಾರಣೆಗೆ ಕೈಗೊಂಡ ಚಿಕಿತ್ಸೆ ಮತ್ತು ಪರಿಹಾರಕಾರ್ಯಗಳು ಮಹಾರಾಜರ ಆಡಳಿತ ವ್ಯವಸ್ಥೆ ನಗರಗಳಿಂದ ಹಳ್ಳಿಗಳವರೆವಿಗೆ ಸಾಂಕ್ರಾಮಿಕರೋಗ ನಿವಾರಣೆಗೆ ಶ್ರಮಿಸಿದ ರೀತಿ, ಸ್ಥಳೀಯ ಆಡಳಿತ ಘಟಕಗಳು, ಸಂಘಸಂಸ್ಥೆಗಳು, ಪ್ರಜಾಪ್ರಮುಖರು, ಸ್ವಯಂ ಸೇವಕರು, ವೈದ್ಯಕೀಯ ಸಿಬ್ಬಂದಿ, ನೈರ್ಮಲ್ಯ ಇಲಾಖೆ, ವಿದ್ಯಾರ್ಥಿ ಸ್ವಯಂ ಸೇವಕರು ನಿರ್ವಹಿಸಿದ ಪಾತ್ರ ಇವೇ ಮೊದಲಾದವುಗಳನ್ನು ಅಧ್ಯಯನಿಸುವ ಉದ್ದೇಶವನ್ನು ಹೊಂದಿದೆ.

ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ ಆಧುನಿಕ ಭಾರತದ ಚರಿತ್ರೆಯಲ್ಲಿ ಮೈಸೂರುಸಂಸ್ಥಾನದ ಇತಿಹಾಸವು ಅತ್ಯಂತ ಮಹತ್ವದ ಅಧ್ಯಾಯ. 1881ರ ನಂತರದ ಆಧುನಿಕ ಮೈಸೂರುಸಂಸ್ಥಾನದ ಇತಿಹಾಸವು ವಿಶೇಷವಾಗಿ ನಾಲ್ವಡಿಕೃಷ್ಣರಾಜಒಡೆಯರ ಆಳ್ವಿಕೆಯ ಕಾಲಘಟ್ಟವು ಪ್ರಗತಿಪರ ಹಾಗೂ ಜನಾನುರಾಗಿ ಆಳ್ವಿಕೆಯು ದೇಶೀಯ ಸಂಸ್ಥಾನಗಳಲ್ಲಿಯೇ ಏಕೆ ಭಾರತದಲ್ಲಿಯೇ ಹತ್ತು ಹಲವು ಪ್ರಥಮಗಳಿಗೆ ಸಾಕ್ಷಿಯಾಗಿ "ಮಾದರಿಸಂಸ್ಥಾನ"ವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಕೃಷಿ, ಕೈಗಾರಿಕೆ, ಸಾಮಾಜಿಕ ಸುಧಾರಣೆ, ಶಿಕ್ಷಣ, ಆರೋಗ್ಯ ಮೊದಲಾದ ಕ್ಷೇತ್ರಗಳ ಸಾಧನೆಗಳು ಇಂದಿಗೂ ಸ್ಮರಣೀಯವಾದವುಗಳಾಗಿವೆ. ಮಹಾತ್ಮ ಗಾಂಧೀಜಿಯರವರು ಮೈಸೂರು ರಾಜ್ಯವನ್ನು ಆದರ್ಶ "ರಾಮರಾಜ್ಯ"ವೆಂದು ಕರೆದು ಮಹಾರಾಜರನ್ನು ರಾಜರ್ಷಿ ಎಂಬುದಾಗಿ ಗೌರವಿಸಿದ್ದು ಅವರ ಆಡಳಿತದ ಹಿರಿಮೆಗೆ ಸಾಕ್ಷಿಯಾಗಿದೆ. ಹೀಗೆ ಮಾದರಿ

ರಾಜ್ಯವಾಗಿದ್ದ ಸಂಸ್ಥಾನವು ಹಲವುಬಾರಿ ಕ್ಷಾಮ, ಪ್ಲೇಗ್, ಕಾಲರಾ, ಸಿಡುಬು, ಮಲೇರಿಯಾದಂತಹ ಗಂಭೀರಕಾಯಿಲೆಗಳಿಗೆ ಗುರಿಯಾಗಿದ್ದು, ಮೊದಲ ಮಹಾಯುದ್ಧದ ಅಂತ್ಯದಲ್ಲಿ ಇಡೀ ಜಗತ್ತನ್ನು ಬಾಧಿಸಿದ ಇನ್‌ಫ್ಲುಯೆಂಜಾ ಎಂಬ ಸಾಂಕ್ರಾಮಿಕರೋಗಕ್ಕೆ ಗುರಿಯಾಗಿ ಜನತೆಯು ಸಾವುನೋವು ಸಂಕಷ್ಟಗಳಿಗೆ ಸಿಲುಕಿ ನರಳುವಂತಾಗಿತ್ತು.

## KEYWORDS:

ಮೈಸೂರು ಸಂಸ್ಥಾನ, ಇನ್‌ಫ್ಲುಯೆಂಜಾ, ಸಾಂಕ್ರಾಮಿಕ ರೋಗ, ನೈರ್ಮಲ್ಯ ಆಯುಕ್ತರು, ಥೈಮೋಲ್ ದ್ರಾವಣ, ತಾತ್ಕಾಲಿಕ ಆಸ್ಪತ್ರೆ.

**ಪೀಠಿಕೆ:** ಕರ್ನಾಟಕ ಇತಿಹಾಸದಲ್ಲಿ ಮಾತ್ರವಲ್ಲದೆ ಆಧುನಿಕ ಭಾರತದ ಚರಿತ್ರೆಯಲ್ಲಿ ಮೈಸೂರು ಸಂಸ್ಥಾನದ ಇತಿಹಾಸವು ಅತ್ಯಂತ ಮಹತ್ವದ ಅಧ್ಯಾಯ. 1881ರ ನಂತರದ ಆಧುನಿಕ ಮೈಸೂರು ಸಂಸ್ಥಾನದ ಇತಿಹಾಸವು ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲಘಟ್ಟವು ಪ್ರಗತಿಪರ ಹಾಗೂ ಜನಾನುರಾಗಿ ಆಳ್ವಿಕೆಯು ದೇಶೀಯ ಸಂಸ್ಥಾನಗಳಲ್ಲಿಯೇ ಏಕೆ ಭಾರತದಲ್ಲಿಯೇ ಹತ್ತು ಹಲವು ಪ್ರಥಮಗಳಿಗೆ ಸಾಕ್ಷಿಯಾಗಿ "ಮಾದರಿ ಸಂಸ್ಥಾನ"ವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಕೃಷಿ, ಕೈಗಾರಿಕೆ, ಸಾಮಾಜಿಕ ಸುಧಾರಣೆ, ಶಿಕ್ಷಣ, ಆರೋಗ್ಯ ಮೊದಲಾದ ಕ್ಷೇತ್ರಗಳ ಸಾಧನೆಗಳು ಇಂದಿಗೂ ಸ್ಮರಣೀಯವಾದವುಗಳಾಗಿವೆ. ಮಹಾತ್ಮ ಗಾಂಧೀಜಿಯರವರು ಮೈಸೂರು ರಾಜ್ಯವನ್ನು ಆದರ್ಶ "ರಾಮರಾಜ್ಯ"ವೆಂದು ಕರೆದು ಮಹಾರಾಜರನ್ನು ರಾಜರ್ಷಿ ಎಂಬುದಾಗಿ ಗೌರವಿಸಿದ್ದು ಅವರ ಆಡಳಿತದ ಹಿರಿಮೆಗೆ ಸಾಕ್ಷಿಯಾಗಿದೆ. ಹೀಗೆ ಮಾದರಿ ರಾಜ್ಯವಾಗಿದ್ದ ಸಂಸ್ಥಾನವು ಹಲವುಬಾರಿ ಕ್ಷಾಮ, ಪ್ಲೇಗ್, ಕಾಲರಾ, ಸಿಡುಬು, ಮಲೇರಿಯಾದಂತಹ ಗಂಭೀರ ಕಾಯಿಲೆಗಳಿಗೆ ಗುರಿಯಾಗಿದ್ದು, ಮೊದಲ ಮಹಾಯುದ್ಧದ ಅಂತ್ಯದಲ್ಲಿ ಇಡೀ ಜಗತ್ತನ್ನು ಬಾಧಿಸಿದ ಇನ್‌ಫ್ಲುಯೆಂಜಾ ಎಂಬ ಸಾಂಕ್ರಾಮಿಕ ರೋಗಕ್ಕೆ ಗುರಿಯಾಗಿ ಜನತೆಯು ಸಾವುನೋವು ಸಂಕಷ್ಟಗಳಿಗೆ ಸಿಲುಕಿ ನರಳುವಂತಾಗಿತ್ತು.

ಮಾರಕ ರೋಗಗಳು ಸಂಸ್ಥಾನದಲ್ಲಿ ಆವರಿಸಿದಾಗ ಮಹಾರಾಜರು ಅಗತ್ಯಕ್ರಮಗಳನ್ನು ಕೈಗೊಂಡು ಜನತೆಯನ್ನು ಪಿಡುಗುಗಳಿಂದ ಪಾರುಮಾಡುತ್ತಿದುದ್ದು ಅವರ ಪ್ರಜಾ ವಾತ್ಸಲ್ಯದ ಪ್ರತೀಕವಾಗಿತ್ತು. ಸಂಸ್ಥಾನದ ಜನತೆಯನ್ನು ಮತ್ತೆ ಮತ್ತೆ ಬಾಧಿಸುತ್ತಿದ್ದ ಮಾರಕ ರೋಗಗಳಲ್ಲಿ ಪ್ಲೇಗ್ ತುಂಬಾ ಗಂಭೀರವಾದುದ್ದಾಗಿತ್ತು. ಈ ರೋಗ ನಿವಾರಣೆಗೆ 1887 ಫೆಬ್ರವರಿ 11ರಂದು ರಾಜ ಪ್ರತಿನಿಧಿಯಾಗಿದ್ದ

ಮಹಾರಾಣಿಯವರು "ಸಾಂಕ್ರಾಮಿಕ ರೋಗ ನಿಯಂತ್ರಣ" ಕಾಯ್ದೆಯನ್ನು ಜಾರಿಗೊಳಿಸಿದರು. ಈ ಕಾಯ್ದೆ ಪ್ರಕಾರ ರೋಗ ನಿಯಂತ್ರಣದ ಮೇಲ್ವಿಚಾರಣೆಗಾಗಿ ಅಧಿಕಾರಿಯನ್ನು ನೇಮಿಸಲಾಯಿತು. ಪ್ಲೇಗ್ ಪೀಡಿತರನ್ನು ಸಮಾಜದಿಂದ ಬೇರ್ಪಡಿಸಿ ಅವರಿಗೆ ಸೂಕ್ತ ಸೌಲಭ್ಯ ಮತ್ತು ಚಿಕಿತ್ಸೆ ನೀಡಿ ರೋಗ ನಿಯಂತ್ರಣ ಮಾಡುವುದು ಈ ಕಾಯ್ದೆಯ ಮುಖ್ಯ ಉದ್ದೇಶವಾಗಿತ್ತು. ಯಾರಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಇಂಡಿಯನ್ ಪೀನಲ್ ಕೋಡ್ 188ರ ಪ್ರಕಾರ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು"[1] ಹೀಗೆ ಮಾರಕ ರೋಗದ ನಿವಾರಣೆಗೆ ಸರ್ಕಾರ ಕಟ್ಟುನಿಟ್ಟಿನ ಕಾನೂನು ಜಾರಿಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

**ಉದ್ದೇಶ:** ಪ್ರಸ್ತುತ ಸಂಶೋಧನಾ ಲೇಖನವು ಮೊದಲ ಮಹಾಯುದ್ಧದ ಅಂತ್ಯದಲ್ಲಿ ವಿಶ್ವದಾದ್ಯಂತ ಹರಡಿದ್ದ ಇನ್‌ಫ್ಲುಯೆಂಜಾ ಸಾಂಕ್ರಾಮಿಕರೋಗವು ಸೈನಿಕರು ಮತ್ತು ವರ್ತಕರ ಮೂಲಕ ಕಲ್ಕತ್ತ ಮತ್ತು ಬಾಂಬೆಗೆ ಬಂದು ನಂತರ ದೇಶದಾದ್ಯಂತ ಹಬ್ಬಿ ಮೈಸೂರು ಸಂಸ್ಥಾನದ ಬೆಂಗಳೂರು ಮತ್ತು ಮೈಸೂರುಗಳಲ್ಲಿ ಹರಡಿ ಹೇಗೆ ಇಡೀ ಸಂಸ್ಥಾನದಾದ್ಯಂತ ಜನತೆಯನ್ನು ಬಾಧಿಸಿತು, ಜನರು ಅನುಭವಿಸಿದ ಸಾವು–ನೋವುಗಳು, ಸರ್ಕಾರ ರೋಗ ನಿವಾರಣೆಗೆ ಕೈಗೊಂಡ ಚಿಕಿತ್ಸೆ ಮತ್ತು ಪರಿಹಾರಕಾರ್ಯಗಳು ಮಹಾರಾಜರ ಆಡಳಿತ ವ್ಯವಸ್ಥೆ ನಗರಗಳಿಂದ ಹಳ್ಳಿಗಳವರೆವಿಗೆ ಸಾಂಕ್ರಾಮಿಕರೋಗ ನಿವಾರಣೆಗೆ ಶ್ರಮಿಸಿದ ರೀತಿ, ಸ್ಥಳೀಯ ಆಡಳಿತ ಘಟಕಗಳು, ಸಂಘ ಸಂಸ್ಥೆಗಳು, ಪ್ರಜಾ ಪ್ರಮುಖರು, ಸ್ವಯಂ ಸೇವಕರು, ವೈದ್ಯಕೀಯ ಸಿಬ್ಬಂದಿ, ನೈರ್ಮಲ್ಯ ಇಲಾಖೆ, ವಿದ್ಯಾರ್ಥಿ ಸ್ವಯಂ ಸೇವಕರು ನಿರ್ವಹಿಸಿದ ಪಾತ್ರ ಇವೇ ಮೊದಲಾದವುಗಳನ್ನು ಅಧ್ಯಯನಿಸುವ ಉದ್ದೇಶವನ್ನು ಹೊಂದಿದೆ.

ಇನ್‌ಫ್ಲುಯೆಂಜಾ ಸಾಂಕ್ರಾಮಿಕ ಕಾಯಿಲೆಯು ಆರಂಭಿಕ ಹಂತದಲ್ಲಿ ಸೌಮ್ಯವಾಗಿತ್ತು. ದೊಡ್ಡಮಟ್ಟದ ಸಾವು ನೋವುಗಳು ಸಂಭವಿಸಿರಲಿಲ್ಲ. ಎರಡನೆಯ ವೈರಾಣು ಅಲೆಯು ಪ್ರಪಂಚದ ಬಹುತೇಕ ರಾಷ್ಟ್ರಗಳಿಗೆ ಹರಡಿತ್ತು. ಸ್ಪೈನ್, ಇಂಗ್ಲೆಂಡ್, ಸ್ಕಾಟ್‌ಲ್ಯಾಂಡ್, ಐರ್ಲ್ಯಾಂಡ್, ಫ್ರಾನ್ಸ್, ಜರ್ಮನಿ, ಸ್ವಿಡ್ಜರ್ಲೆಂಡ್, ಮೆಸಪಟೋಮಿಯಾ, ಆಫ್ಘಾನಿಸ್ತಾನ, ಭಾರತ ಮೊದಲಾದ ದೇಶಗಳು ಮಾರಕರೋಗದ ಎರಡನೆಯ ಅಲೆಗೆ ಸಿಲುಕಿ ತತ್ತರಿಸಿಹೋದವು. ಮಿಂಚಿನ ವೇಗದಲ್ಲಿ ಹಬ್ಬುತ್ತಿದ್ದ ಮಾರಕಪಿಡುಗು 1918ರ ಅಕ್ಟೋಬರ್–ನವಂಬರ್‌ಗಳಲ್ಲಿ ಗಂಭೀರ ಸ್ವರೂಪ ಪಡೆದುಕೊಂಡು[2] ಅಪಾರ ಸಾವು ನೋವಿಗೆ ಕಾರಣವಾಯಿತು.

ಈ ನಿಗೂಢ ಮಾರಕ ರೋಗವು 1918 ಮೇ ಅಂತ್ಯದ ವೇಳೆಗೆ ಕಲ್ಕತ್ತ

ಮತ್ತು ಬಾಂಬೆಯಲ್ಲಿ ಕಾಣಿಸಿಕೊಂಡು ಯಾವುದೇ ಸ್ಥಾನಮಾನ ಲೆಕ್ಕಿಸದೆ ಮಿಂಚಿನ ವೇಗದಲ್ಲಿ ಹರಡಿ ನೂರಾರು ಜನರನ್ನು ಬಲಿ ತೆಗೆದುಕೊಂಡಿತು. ಜೂನ್ ಅಂತ್ಯದ ವೇಳೆಗೆ ಮೈಸೂರು ಸಂಸ್ಥಾನವು ಸಹ ಇದರ ಪ್ರಭಾವಕ್ಕೆ ಒಳಗಾಯಿತು. ಜುಲೈ ಅಂತ್ಯದವರೆವಿಗೆ ಇದರ ಪ್ರಭಾವವು ಸಾಧಾರಣವಾಗಿತ್ತು.[3]

1918ರ ಸೆಪ್ಟಂಬರ್‌ನಲ್ಲಿ ಇನ್‌ಫ್ಲುಯೆಂಜಾ ಸಾಂಕ್ರಾಮಿಕರೋಗದ ಎರಡನೇ ಅಲೆ ಆರಂಭವಾಗಿ ಎಲ್ಲಾ ಕಡೆ ವ್ಯಾಪಕವಾಗಿ ಹಬ್ಬಿತ್ತಲ್ಲದೆ ತೀವ್ರಸ್ವರೂಪ ಪಡೆದುಕೊಂಡಿತು. ಪ್ಲೇಗ್ ವ್ಯಾಧಿಗಿಂತಲೂ ಹೆಚ್ಚು ಮಾರಕವಾಗಿ ಅಪಾರ ಸಾವುನೋವುಗಳನ್ನುಂಟು ಮಾಡಿತು. ಭಾರತದ ಇತಿಹಾಸದಲ್ಲಿ ಯಾವ ರೋಗದಿಂದಲೂ ದಾಖಲಾಗದಷ್ಟು ವ್ಯಾಪಕವೂ, ಮಾರಣಾಂತಿಕವೂ ಆಗಿತ್ತು. ಇಷ್ಟು ಅಲ್ಪಕಾಲದಲ್ಲಿ ಯಾವರೋಗವು ಇದುವರೆಗೂ ಜಗತ್ತಿನ ಇಷ್ಟೊಂದು ದೇಶಗಳಿಗೆ ಹರಡಿ ಮಾರಣಹೋಮ ನಡೆಸಿರಲಿಲ್ಲ. ಈ ಸಾಂಕ್ರಾಮಿಕ ರೋಗವು ಭಾರತದ ಮಟ್ಟಿಗಂತೂ ರಾಷ್ಟ್ರೀಯ ವಿಪತ್ತಾಗಿ ಪರಿಣಮಿಸಿತ್ತು. ಭಾರತ ಸರ್ಕಾರದ ನೈರ್ಮಲ್ಯ ಆಯುಕ್ತರು ಈ ಸಾಂಕ್ರಾಮಿಕ ಕಾಯಿಲೆಯ ಬಗ್ಗೆ ಪ್ರಾಥಮಿಕ ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸುವ ವೇಳೆಗೆ ಬ್ರಿಟಿಷ್ ಭಾರತದಲ್ಲಿ ಇನ್‌ಫ್ಲುಯೆಂಜಾದ ಮಾರಕದಾಳಿಗೆ 1918ರ ಕೊನೆಯ ತ್ರೈಮಾಸಿಕದ ವೇಳೆಗೆ 5 ಮಿಲಿಯನ್ ಜನರು ಬಲಿಯಾಗಿದ್ದರು.[4]

ಈ ವರದಿ ಸಿದ್ದಪಡಿಸುವ ವೇಳೆಗೆ ದೇಶೀಯ ಸಂಸ್ಥಾನಗಳ ಅಂಕಿ ಅಂಶಗಳು ನಿಖರವಾಗಿ ಲಭ್ಯವಾಗಿರಲಿಲ್ಲ ಎಂದಿರುವುದು, ದೇಶೀಯ ಸಂಸ್ಥಾನದ ಮರಣಸಂಖ್ಯೆ ಸೇರಿದರೆ ಸಾವಿನ ಪ್ರಮಾಣವು ಎಷ್ಟು ಅಗಾಧವಾಗಿತ್ತು ಹಾಗೂ ಜನಸಾಮಾನ್ಯರು ಹೇಗೆ ಈ ರೋಗಬಾಧೆಗೆ ಸಿಲುಕಿ ಜೀವ ತೆತ್ತರೆಂಬುದು ಅರಿವಾಗದೆ ಇರಲಾರದು. ಸುಮಾರು 22 ವರ್ಷಗಳಲ್ಲಿ ಭಾರತ ದೇಶದಲ್ಲಿ ಪ್ಲೇಗ್ ಮಹಾಮಾರಿಗೆ ಬಲಿಯಾದ ಜನರ ಅರ್ಧದಷ್ಟು ಕೆಲವೇಕೆಲವು ತಿಂಗಳಲ್ಲಿ ಈ ಮಾರಕರೋಗಕ್ಕೆ ಬಲಿಯಾದರೆಂದರೆ,[5] ಈ ಸಾಂಕ್ರಾಮಿಕರೋಗದ ಕರಾಳತೆ ತಿಳಿಯುತ್ತದೆ. ಮೈಸೂರು ಸಂಸ್ಥಾನದಲ್ಲಿಯೂ ಸೆಪ್ಟಂಬರ್‌ನಿಂದ ನವೆಂಬರ್‌ನಲ್ಲಿ ಸಾಂಕ್ರಾಮಿಕ ಕಾಯಿಲೆ ತೀವ್ರಸ್ವರೂಪ ಪಡೆದುಕೊಂಡಿತ್ತು.

**ಇನ್‌ಫ್ಲುಯೆಂಜಾ ಸಾಂಕ್ರಾಮಿಕ ರೋಗದ ಲಕ್ಷಣಗಳು:**

ಈ ಮಾರಕ ಕಾಯಿಲೆಯ ವೈರಾಣುಗಳು ಮನುಷ್ಯನ ಶರೀರವನ್ನು ಪ್ರವೇಶಿಸುವುದರಿಂದ ಉಂಟಾಗುತ್ತಿತ್ತು. ಇನ್‌ಫ್ಲುಯೆಂಜಾ ವೈರಾಣುವು ತುಂಬಾ ಸೂಕ್ಷ್ಮವಾಗಿದ್ದು, ಮನುಷ್ಯನ ರಕ್ತದಲ್ಲಿ ಬೆಳೆಯುತ್ತಿದ್ದರಿಂದ ಮನುಷ್ಯನ ದೇಹಬಿಟ್ಟು

ಜೀವಿಸಲಾರದು.

ನೆಗಡಿ, ಕೆಮ್ಮು, ಸೀನು, ಗಂಟಲು ನೋವು, ತಲೆನೋವು, ಜ್ವರ, ಮೈಕೈ ನೋವು, ನಿಶ್ಯಕ್ತಿ, ಉಸಿರಾಟದ ಸಮಸ್ಯೆ ಹಾಗೂ ಕ್ಷಯದಂತಹ ರೋಗಗಳು ಈ ಸಾಂಕ್ರಾಮಿಕರೋಗದ ಪ್ರಮುಖ ಚಿಹ್ನೆಗಳು. ಈ ಮಾರಕರೋಗದಿಂದ ದೇಹದ ಅವಯವಗಳು ತ್ರಾಣವನ್ನು ಕುಗ್ಗಿಸಿ ದುರ್ಬಲಗೊಳಿಸುವುದು ಕೆಮ್ಮು ಮತ್ತು ಶ್ಲೇಷ್ಮಜ್ವರ ಉಂಟಾಗುವುದು.[6] ಮೊದಲ ವಿಧದಲ್ಲಿ ಕಾಣಿಸಿಕೊಂಡ ಜ್ವರದ ತಾಪವು ಸುಮಾರು 101 ಡಿಗ್ರಿಗಳವರೆಗೆ ಇದ್ದು ಸಾಧಾರಣವಾಗಿ 3–4 ದಿವಸಗಳಲ್ಲಿ ಗುಣಮುಖವಾಗುತ್ತಿತ್ತು. ಎರಡನೆಯ ವಿಧದಲ್ಲಿ ಶ್ಲೇಷ್ಮ ಜ್ವರವೆಂದು ಕರೆಯಲಾಗುತ್ತಿತ್ತು. ಇದು 9–10 ದಿನಗಳವರೆಗೆ ಇದ್ದು 104 ಡಿಗ್ರಿಗಳವರೆಗೆ ಏರಿ ರೋಗಿಯು ಜ್ಞಾನ ಅಜ್ಞಾನವಾಗಿ ಮಾತನಾಡುತಿದ್ದರು. ರೋಗಿಯು ಕೆಮ್ಮಿದಾಗ ರಕ್ತ ಮಿಶ್ರವಾದ ಶ್ಲೇಷ್ಮವನ್ನು ಉಗುಳುವುದು, ಮೂರನೆಯ ಬಗೆಯ ಜ್ವರದ ಲಕ್ಷಣಗಳು ತೀವ್ರವಾಗಿ ಪರಿಣಮಿಸಿ ಹದಿನೈದು ದಿನದವರೆಗೆ ಕಡಿಮೆಯಾಗುತ್ತಿರಲಿಲ್ಲ.[7] ಎರಡು ಮತ್ತು ಮೂರನೆಯ ವಿಧದ ಹಂತದಲ್ಲಿ ಈ ಸಾಂಕ್ರಾಮಿಕರೋಗವು ಪ್ರಾಣಾಪಾಯದಿಂದ ಕೂಡಿರುತ್ತಿತ್ತು. ಎರಡನೆಯ ಅಲೆಯಲ್ಲಿ ಈ ರೋಗವು ಗಂಭೀರ ಸ್ವರೂಪ ಪಡೆದುಕೊಂಡು ಶ್ವಾಸಕೋಶ ಮತ್ತು ಶ್ವಾಸೇಂದ್ರೀಯಗಳ ಮೇಲೆ ಮಾರಣಾಂತಿಕ ಪರಿಣಾಮ ಬೀರಿತ್ತು.

ಈ ಸಾಂಕ್ರಾಮಿಕ ಕಾಯಿಲೆಯು ರೋಗಪೀಡಿತರು ಕೆಮ್ಮುವುದು, ಸೀನುವುದು ಮತ್ತು ಉಗುಳುವುದಿರಂದ ವೈರಾಣುಗಳು ಗಾಳಿಯ ಮೂಲಕ ಇತರರ ಉಸಿರಾಟದಲ್ಲಿ ಮೂಗು ಮತ್ತು ಗಂಟಲುಗಳ ಮೂಲಕ ದೇಹವನ್ನು ಪ್ರವೇಶಿಸಿ ಶೀಘ್ರವಾಗಿ ಒಬ್ಬರಿಂದಒಬ್ಬರಿಗೆ ಹಬ್ಬುತ್ತಿತ್ತು.

ಮೈಸೂರು ಸಂಸ್ಥಾನದ ನೈರ್ಮಲ್ಯ ಕಮಿಷನರ್ ಹೊರಡಿಸಿದ ಪ್ರಕಟಣೆಯಲ್ಲಿ ರೋಗ ಪೀಡಿತರು ಅನುಸರಿಸಬೇಕಾದ ನಿಯಮಗಳು ಈ ರೀತಿ ಇವೆ:

**ರೋಗಪೀಡಿತರು ಅನುಸರಿಸಬೇಕಾದ ನಿಯಮಗಳು:**

ದೇಹಾಲಸ್ಯ ತೋರಿದ ತಕ್ಷಣವೇ ಹಾಸಿಗೆಯಲ್ಲಿ ಮಲಗಬೇಕು. ಮಲಗುವ ಕೊಠಡಿಯ ಬಾಗಿಲು ಕಿಟಕಿಗಳು ತೆರೆದು ಒಳ್ಳೆಯ ಗಾಳಿ ಬರುವಂತಿರಬೇಕು. ಶರೀರವನ್ನು ಸರಿಯಾದ ಹೊದಿಕೆಯಿಂದ ಶಾಖವಾಗಿಡತಕ್ಕದ್ದು. ಎಪ್ಸೆಂಸಾಲ್ಟ್ ಅಥವಾ ಇತರೆ ಬೇಧಿಕಾರಕ ಔಷಧಿಗಳಿಂದ ಮಲಬದ್ಧತೆಯನ್ನು ಹೋಗಲಾಡಿಸುತ್ತಿರಬೇಕು. ಒಂದು ಗುಟುಕು ನೀರಿನಲ್ಲಿ ಐದು ಹನಿ ಥೈಮೋಲ್ ದ್ರಾವಕವನ್ನು ಸೇರಿಸಿ ದಿನಕ್ಕೆ ಮೂರು ಬಾರಿ ತೆಗೆದುಕೊಳ್ಳುವುದು. ಘನ

ರೂಪದ ಆಹಾರ ತೆಗೆದುಕೊಳ್ಳದೆ ದ್ರವರೂಪದ ಹಾಲು ಅಥವಾ ಗಂಜಿಯನ್ನು ಉಪಯೋಗಿಸತಕ್ಕದ್ದು. ಸಾಧ್ಯವಾದರೆ ವೈದ್ಯರನ್ನು ಕಂಡು ಅವರು ಹೇಳಿದಂತೆ ಅನುಸರಿಸತಕ್ಕದ್ದು, ಜ್ವರ ನಿವಾರಣೆಯಾಗುವವರೆಗೂ ಶ್ರಮದಾಯಕ ಕೆಲಸ ಮತ್ತು ಮಾನಸಿಕ ಕೆಲಸಗಳನ್ನು ಮಾಡಕೂಡದು. ಜನಸಂದಣಿಯಿಂದ ಗಾಳಿಕೆಡಲು ಆಸ್ಪದವಿರುವ ಮನೆಗಳಲ್ಲಿರುವ ರೋಗಿಗಳು ಸ್ವಚ್ಛವಾದ ಗಾಳಿಬರುವ ಪ್ರದೇಶಗಳಲ್ಲಿ ಸ್ಥಾಪಿಸಿರುವ ಕ್ಯಾಂಪ್ ಆಸ್ಪತ್ರೆಗಳಿದ್ದರೆ ಅಲ್ಲಿಗೆ ಹೋಗಬೇಕು[8] ಎಂಬ ಇವೇ ಮೊದಲಾದ ನಿಯಮಗಳನ್ನು ರೋಗ ನಿವಾರಣೆಗಾಗಿ ಸರ್ಕಾರದವರಿಂದ ಪ್ರಕಟಿಸಿ ಸಾರ್ವಜನಿಕವಾಗಿ ಹಂಚಿ ಜನರಲ್ಲಿ ಜಾಗೃತಿ ಮೂಡಿಸಲಾಗಿತ್ತು.

**ಆರೋಗ್ಯವಂತರು ಅನುಸರಿಸಬೇಕಾದ ನಿಯಮಗಳು:**

ಆರೋಗ್ಯವಂತರು ಜನಜಂಗುಳಿ ಪ್ರದೇಶಗಳಿಗೆ ಹೋಗಬಾರದು, ಕೆಮ್ಮುತ್ತಿರುವ ಜನಗಳೊಂದಿಗೆ ಬೆರೆಯದೆ ಇರುವುದು, ಒಂದು ಗುಟುಕುನೀರಿಗೆ 5 ಹನಿ ಥೈಮೋಲ್ ದ್ರಾವಕವನ್ನು ಬೆರೆಸಿ ರೋಗ ನಿವಾರಣಾರ್ಥವಾಗಿ ದಿನಕ್ಕೆ ಎರಡು ಬಾರಿ ಕುಡಿಯುವುದು, ಒಂದು ಪಂಚ ಪಾತ್ರೆ ನೀರಿನಲ್ಲಿ 10 ತೊಟ್ಟಿನಷ್ಟು ಥೈಮೋಲ್ ದ್ರಾವಕವನ್ನಾಗಲಿ ಒಂದು ಗ್ರಾಂನಷ್ಟು ಪೊಟಾಸಿಯಂ ಪರಮ್ಯಾಂಗನೇಟ್ ಎಂಬ ಉಪ್ಪನ್ನಾಗಲೀ ಬೆರೆಸಿ ಪದೇ ಪದೇ ಬಾಯಿ ಮುಕ್ಕಳಿಸತಕ್ಕದ್ದು, ಬಿಸಿನೀರನ್ನು ಮೂಗಿನಿಂದ ಸೇದಿ ಮೂಗಿನ ಹೊಳ್ಳೆಗಳನ್ನು ಶುದ್ಧಿ ಮಾಡತಕ್ಕದ್ದು, ಸುಲಭವಾಗಿ ಜೀರ್ಣವಾಗುವ ಆಹಾರವನ್ನು ನಿಯಮಿತವಾಗಿ ಉಪಯೋಗಿಸುವುದು. ಮಲ ಬದ್ಧತೆಯನ್ನು ಹೋಗಲಾಡಿಸುವುದು. ರಾತ್ರಿ–ಹಗಲು ಸಾಧ್ಯವಾದಷ್ಟು ಕಾಲ ಗಾಳಿ ಬೀಸುವ ಪ್ರದೇಶದಲ್ಲಿ ಇರತಕ್ಕದ್ದು. ದೇಹಕ್ಕೂ ಮನಸ್ಸಿಗೂ ಆಯಾಸವಾಗುವ ಕೆಲಸಗಳನ್ನು ಮಾಡದೆ ಇರುವುದು.[9]

ರೋಗವಿಲ್ಲದವರು ಸಾಧ್ಯವಾದ ಮಟ್ಟಿಗೆ ಜನಸಂದಣಿ ಇರುವ ರೈಲು, ಮೋಟಾರ್ ಬಸ್ಸು ಮೊದಲಾದವುಗಳಲ್ಲಿ ಸಂಚರಿಸಬಾರದು, ನಾಟಕ, ದೇವಸ್ಥಾನ, ಜಾತ್ರೆಗಳಂತಹ ಜನನಿಬಿಡ ಪ್ರದೇಶಗಳಿಗೆ ಹೋಗಬಾರದೆಂದೂ, ರೋಗಿಗಳೊಂದಿಗೆ ಒಂದೇ ಕೊಠಡಿಯಲ್ಲಿ ಮಲಗಬಾರದು ಇತ್ಯಾದಿಯಾಗಿ ಆರೋಗ್ಯವಾಗಿರುವ ಜನರು ಮುನ್ನೆಚ್ಚರಿಕೆಯಾಗಿ ಅನುಸರಿಸಬೇಕಾದ ನಿಯಮಗಳನ್ನು ಜನಜಾಗೃತಿಗಾಗಿ ಮೈಸೂರು ಸರ್ಕಾರದ ನೈರ್ಮಲ್ಯ ಆಯುಕ್ತರಾದ ಎಂ. ಶ್ರೀನಿವಾಸ್‌ರಾವ್‌ರವರು ಹೊರಡಿಸಿದ್ದ ಪ್ರಕಟಣೆಯು ಸರ್ಕಾರವು ರೋಗ ನಿವಾರಣೆಗೆ ಎಚ್ಚರಿಕೆಯ ಕ್ರಮಗಳನ್ನು ಹೇಗೆ ತೆಗೆದುಕೊಂಡಿತ್ತೆಂದು ತಿಳಿಯುತ್ತದೆ. ಬೆಂಗಳೂರಿನ ಆರೋಗ್ಯ ಇಲಾಖೆಯ ಹಿರಿಯ ವೈದ್ಯಾಧಿಕಾರಿಗಳೂ ಸಹ ಇದೇ ರೀತಿಯ ಸುಮಾರು 20000

ಪ್ರತಿಗಳನ್ನು ಮಾಡಿಸಿ ಸಂಸ್ಥಾನಾದ್ಯಂತ ಹಂಚಿಕೆ ಮಾಡುವ ವ್ಯವಸ್ಥೆ ಮಾಡಿರುವುದು ಕಂಡುಬರುತ್ತದೆ.

ಹಿರಿಯ ವೈದ್ಯಾಧಿಕಾರಿಗಳಾದ ಆರ್‌ಮುಗಂರವರು ಸಮೀಪದಲ್ಲಿ ಆಸ್ಪತ್ರೆಗಳು ಇಲ್ಲದ ಪಕ್ಷದಲ್ಲಿ ಮೆಣಸು 1/4 ತೊಲೆ, ಓಮ 1/4 ತೊಲೆ ಹಾಗೂ ಬೆಳ್ಳುಳ್ಳಿ 1/4 ತೊಲೆ ಇವುಗಳನ್ನು ಅರೆವಡಕಲು ಮಾಡಿ ಅರ್ಧ ಪಾವಿನಷ್ಟು ನೀರಿನಲ್ಲಿ ಕುದಿಸಿ ಆ ಕಷಾಯವನ್ನು ಮೂರುಭಾಗ ಮಾಡಿ ದಿನಕ್ಕೆ ಮೂರು ಬಾರಿ ಕುಡಿಸುವಂತೆ[10] ಸಹ ಸೂಚಿಸಿರುವುದು ಆರೋಗ್ಯ ಇಲಾಖೆಯ ದಾಖಲೆಗಳಿಂದ ತಿಳಿದು ಬರುತ್ತದೆ.

ಹೀಗೆ ಆರೋಗ್ಯ ಇಲಾಖೆ ಮತ್ತು ಸಂಸ್ಥಾನದ ನೈರ್ಮಲ್ಯ ಆಯುಕ್ತರು ಇನ್‌ಫ್ಲುಯೆಂಜಾ ರೋಗನಿವಾರಣೆ ಮತ್ತು ಹರಡದಂತೆ ತಡೆಯಲು ಜನಸಾಮಾನ್ಯರಿಗೆ ಸಾಂಕ್ರಾಮಿಕ ರೋಗದ ಬಗ್ಗೆ ನೀತಿನಿಯಮಗಳನ್ನು ಪ್ರಕಟಿಸಿ ಜನರನ್ನು ಜಾಗೃತಗೊಳಿಸಿ ರೋಗದಿಂದ ಪಾರಾಗುವ ಮಾರ್ಗೋಪಾಯಗಳನ್ನು ಸೂಚಿಸಿ ಪ್ರಕಟಿಸಿರುವುದು ಕಂಡುಬರುತ್ತದೆ.

**ಸಾಂಕ್ರಾಮಿಕರೋಗ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳು:**

ಈಗಾಗಲೇ ಪ್ರಸ್ತಾಪಿಸಿದಂತೆ ಇನ್‌ಫ್ಲುಯೆಂಜಾ ಸಾಂಕ್ರಾಮಿಕರೋಗವು ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಜೂನ್ ಅಂತ್ಯದ ವೇಳೆಗೆ ಕಾಣಿಸಿಕೊಂಡಿತ್ತು. ಜುಲೈ ಅಂತ್ಯದವರೆಗಿನ ಮೊದಲ ಅಲೆಯ ತೀವ್ರತೆ ಸಾಧಾರಣವಾಗಿತ್ತು. ಸೆಪ್ಟಂಬರ್ 1918ರಲ್ಲಿ ಸಾಂಕ್ರಾಮಿಕರೋಗದ ಎರಡನೆಯ ಅಲೆಯು ತೀವ್ರಸ್ವರೂಪ ಪಡೆದುಕೊಂಡು ನಗರದಿಂದ ಹಳ್ಳಿಗಳವರೆಗೆ ವೇಗವಾಗಿ ಹಬ್ಬಿ ಮಾರಣಾಂತಿಕ ಸ್ವರೂಪ ತಾಳಿತು. ಮೈಸೂರು ಭಾಗದಲ್ಲಿ ಈ ಮಾರಕರೋಗವನ್ನು ವಿಷಮಶೀತ ಜ್ವರ ಎಂದು ಕರೆಯಲಾಗುತ್ತಿತ್ತು. ಈ ಸಾಂಕ್ರಾಮಿಕ ಪಿಡುಗನ್ನು ಎದುರಿಸಲು 05–10–1918ರಂದು ನಡೆದ ಬೆಂಗಳೂರು ನಗರದ ಪುರಸಭೆಯು ಏರ್ಪಡಿಸಿದ್ದ ಸಭೆ ಈ ಭಯಾನಕ ಪಿಡುಗು ನಮ್ಮ ಮಧ್ಯದಲ್ಲಿದೆ ಎಂದು ಗುರುತಿಸುವ ವೇಳೆಗೆ ಈ ಮಾರಕರೋಗವು ಜನಸಮುದಾಯದ ಮೇಲೆ ತನ್ನ ಹಿಡಿತಸಾಧಿಸಿತ್ತು.[11]

ಪುರಸಭೆಯು ಅಕ್ಟೋಬರ್ 6 ಮತ್ತು 7 ರಂದು ಸಂಗ್ರಹಿಸಿದ ಅಂಕಿ ಅಂಶಗಳ ಪ್ರಕಾರ ಬೆಂಗಳೂರು ನಗರದಲ್ಲಿ 10 ಸಾವಿರ ಜನ ಸಾಂಕ್ರಾಮಿಕರೋಗಕ್ಕೆ ಗುರಿಯಾಗಿದ್ದರು. ಕೆಲವು ಮನೆಗಳಲ್ಲಿ ರೋಗಿಗಳನ್ನು ಉಪಚರಿಸಲು ಯಾರು ಇಲ್ಲದಂತೆ ಕಾಯಿಲೆ ಆವರಿಸಿತ್ತು. ನಗರದ ಚಿಕಿತ್ಸಾಲಯಗಳು ಅಗಾಧವಾದ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಆಸ್ಪತ್ರೆ ಮತ್ತು ಔಷಧಿಗಳ ಅಂಗಡಿಯ

ಬಾಗಿಲುಗಳು ರೋಗಪೀಡಿತರಿಂದ ತುಂಬಿ ತುಳುಕುತ್ತಿದ್ದವು. ಬಡಜನರ ಪರಿಸ್ಥಿತಿಯು ಹೇಳತೀರದಾಗಿತ್ತು.[12]

1918 ಅಕ್ಟೋಬರ್ 10ರಂದು ಪುರಸಭೆಯ ಅಧ್ಯಕ್ಷರು ಸಾಂಕ್ರಾಮಿಕರೋಗ ನಿವಾರಣೆ ಪರಿಹಾರಕಾರ್ಯಗಳನ್ನು ಕೈಗೊಳ್ಳಲು ಪುರಸಭೆಯ ಕಛೇರಿಯಲ್ಲಿ ಕೌನ್ಸಿಲರ್‌ಗಳು ಮತ್ತು ಸಾಮಾಜಿಕ ಕಾರ್ಯದಲ್ಲಿ ಆಸಕ್ತಿ ಇರುವ ನಾಗರಿಕರಸಭೆ ಕರೆದು ಪರಿಹಾರಕಾರ್ಯ ನಿರ್ವಹಿಸಲು ಬೆಂಗಳೂರು ನಗರವನ್ನು ಹಲವಾರು ಬ್ಲಾಕ್‌ಗಳಾಗಿ ವಿಂಗಡಿಸಿ ಪ್ರತಿಯೊಂದು ಬ್ಲಾಕ್‌ಗೂ ಪ್ರತ್ಯೇಕ ಪರಿಹಾರ ಪಕ್ಷಗಳನ್ನು (ಸಮಿತಿ) ರಚಿಸಿ ಅಧೀಕ್ಷರುಗಳು ಉಸ್ತುವಾರಿ ವಹಿಸುವಂತೆ ಸೂಚಿಸಲಾಯಿತು. ಈ ಪರಿಹಾರ ಪಕ್ಷದವರು ತಮ್ಮತಮ್ಮ ಬ್ಲಾಕ್‌ಗಳಲ್ಲಿ ಮನೆಮನೆಗಳಿಗೆ ಹೋಗಿ ಸಮೀಕ್ಷೆ ನಡೆಸಿ ರೋಗಿಗಳ ಅಂಕಿ ಅಂಶ ಸಂಗ್ರಹಿಸುವುದದ ಜೊತೆಗೆ ಅಗತ್ಯ ಪರಿಹಾರ, ಔಷಧಿ, ಗಂಜಿಯನ್ನು ವಿತರಿಸಬೇಕಾಗಿತ್ತು. ಸರ್ಕಾರಿ ಅನ್ನಛತ್ರದ ಬಳಿ ಇರುವ ಪುರಸಭೆಯ ಉದ್ಯಾನವನವನ್ನು ಕೇಂದ್ರ ಪರಿಹಾರ ಸಾಮಗ್ರಿಗಳ ವಿತರಣಾ ಕೇಂದ್ರವನ್ನಾಗಿ ಮಾಡಿಕೊಳ್ಳಲಾಯಿತು.

ಅಕ್ಟೋಬರ್ 12ರಂದು ಆರಂಭವಾದ ಪರಿಹಾರ ಪಕ್ಷಗಳಲ್ಲಿ ಕೌನ್ಸಿಲರ್‌ಗಳು, ಮಿಷನರಿ ಸಜ್ಜನರು, ಗೋಖಲೆ ಲೀಗಿನ ಸದಸ್ಯರು, ಹವ್ಯಾಸಿ ನಾಟಕ ಸಂಘದ ಸದಸ್ಯರು, ಸ್ವಯಂ ಸೇವಕ ವಿದ್ಯಾರ್ಥಿಗಳಿಂದ ಕೂಡಿದ ಸಮಿತಿಗಳು ಆರಂಭದಲ್ಲಿ ಕೇವಲ 9 ಸಮಿತಿಗಳಿದ್ದು ಸಾಂಕ್ರಾಮಿಕರೋಗವು ಗಂಭೀರಸ್ವರೂಪ ಪಡೆದುಕೊಂಡಾಗ ಅವುಗಳ ಸಂಖ್ಯೆ 55ಕ್ಕೆ ಏರಿಕೆಯಾಗಿತ್ತು.[13] ಹೆಚ್ಚಿನ ಸಂಖ್ಯೆಯ ಅಧೀಕ್ಷಕರು ಗೋಖಲೆ ಲೀಗಿನಿಂದ ಬಂದವರಾಗಿದ್ದರು. ದಿ ನ್ಯಾಷನಲ್ ಹೈಸ್ಕೂಲ್, ದಿ ಸೆಂಟ್ರಲ್ ಕಾಲೇಜ್, ದಿ ಸರ್ಕಾರಿ ಕಲೇಜಿಯೇಟ್ ಹೈಸ್ಕೂಲ್, ಒಕ್ಕಲಿಗರ ಸಂಘ, ವೀರಶೈವ ವಿದ್ಯಾರ್ಥಿ ಹಾಸ್ಟೆಲ್ ಮತ್ತು ಸಿಟಿಬಾಯ್ಸ್ ಸ್ಕೌಟ್ಸ್ ಸಂಸ್ಥೆ ಸೇರಿದಂತೆ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಸಾಂಕ್ರಾಮಿಕರೋಗ ನಿವಾರಣಾ ಪರಿಹಾರಕಾರ್ಯದಲ್ಲಿ ಭಾಗಿಯಾಗಿದ್ದರು.

ಪರಿಹಾರ ಸಮಿತಿಯವರು ಮನೆಮನೆಗೆ ತೆರಳಿ ಸಮೀಕ್ಷೆ ನಡೆಸಿ ಪರಿಹಾರಕಾರ್ಯ ನಿರ್ವಹಿಸುತ್ತಿದ್ದಾಗ ಕಂಡ ದೃಶ್ಯಗಳು ಮನಕಲಕುವಂತೆ ದಾರುಣವಾಗಿರುತ್ತಿದ್ದವು. ಮಾರಕರೋಗದಿಂದ ಎಷ್ಟೋ ಮನೆಗಳಲ್ಲಿ ಆಹಾರ ತಯಾರಿಸುವವರಿಲ್ಲದೆ ಹಸಿವಿನಿಂದ ನರಳುತ್ತಿದ್ದರಲ್ಲದೆ ಕೆಲವು ಮನೆಗಳಲ್ಲಿ ಸತ್ತದೇಹಗಳನ್ನು ಹೊರತೆಗೆಯಲಾಗದ ಪರಿಸ್ಥಿತಿಗಳು ಸಹ ಕಂಡು ಬಂದಿದ್ದು ಸಾಂಕ್ರಾಮಿಕರೋಗದ ಭೀಕರತೆಯನ್ನು ತಿಳಿಸುತ್ತದೆ.

ಮಾಗಡಿ ರಸ್ತೆಯ ಪ್ಲೇಗ್ ಚಿಕಿತ್ಸಾಲಯದ ಪಕ್ಕದಲ್ಲಿ ಇನ್‌ಫ್ಲುಯೆಂಜಾ ರೋಗಿಗಳ ಚಿಕಿತ್ಸೆಗಾಗಿ ತಾತ್ಕಾಲಿಕ ಆಸ್ಪತ್ರೆಯನ್ನು ಆರಂಭಿಸಲಾಯಿತು. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನೂರು ಹಾಸಿಗೆಗಳ ಪ್ರತ್ಯೇಕ ಚಿಕಿತ್ಸ ವಿಭಾಗ ತೆರೆಯಲಾಯಿತು. ಧರ್ಮಾಂಬುದಿಕೆರೆ ಸಮೀಪದ ಪುರಸಭೆಯ ಉದ್ಯಾನವನದಲ್ಲಿ ತಾತ್ಕಾಲಿಕ ಆಸ್ಪತ್ರೆಯನ್ನು ತೆರೆದು ಸಾಂಕ್ರಾಮಿಕ ರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು. ವೈದ್ಯಾಧಿಕಾರಿಗಳು, ತರಬೇತಿ ಹೊಂದಿದ ವ್ಯಕ್ತಿಗಳು ನಿವೃತ್ತ ವೈದ್ಯರು ಮೊದಲಾದವರನ್ನು ಬಳಸಿಕೊಂಡು ಹಗಲು–ರಾತ್ರಿ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಿದ ಸರ್ಕಾರವು ರೋಗನಿವಾರಣೆಗೆ ಬೇಕಾದ ಎಲ್ಲಾಕ್ರಮಗಳನ್ನು ಕೈಗೊಂಡಿತ್ತು.

ಬೆಂಗಳೂರು ಜಿಲ್ಲೆಯ 10 ತಾಲ್ಲೂಕುಗಳಲ್ಲಿ ಇನ್‌ಪ್ಲುಯೆಂಜಾಕ್ಕೆ 1,52,323 ಜನ ಒಳಗಾದವರು ಅದರಲ್ಲಿ ಒಟ್ಟು 16600 ಜನ ಮಾರಕ ರೋಗಕ್ಕೆ ಬಲಿಯಾಗಿರುವುದು ಕಂಡುಬರುತ್ತದೆ.[14]

ಇದೇ ರೀತಿ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳು, ವೈದ್ಯಾಧಿಕಾರಿಗಳು, ಪುರಸಭೆಯ ಅಧ್ಯಕ್ಷರು ಸರ್ಕಾರದ ನಿರ್ದೇಶನದಂತೆ ತಮ್ಮ ತಮ್ಮ ವ್ಯಾಪ್ತಿಗಳಲ್ಲಿ ಸಾಂಕ್ರಾಮಿಕ ರೋಗನಿವಾರಣೆ ಹಾಗೂ ಪರಿಹಾರಕಾರ್ಯಗಳನ್ನು ಕೈಗೊಂಡಿರುವುದು ವೈದ್ಯಕೀಯ ದಾಖಲೆಗಳಿಂದ ತಿಳಿದುಬರುತ್ತದೆ.

ಮೈಸೂರು ನಗರದಲ್ಲಿ ಅಕ್ಟೋಬರ್ 13ರಂದು ಪುರಸಭೆ ಅಧ್ಯಕ್ಷರು ಸಭೆ ನಡೆಸಿ ನಗರವನ್ನು 8 ವಾರ್ಡ್‌ಗಳು ಮತ್ತು 20 ಉಪವಿಭಾಗಗಳನ್ನಾಗಿ ವಿಭಾಗಿಸಿ ಕೌನ್ಸಿಲರ್ ಮತ್ತು ಗೌರವಾನ್ವಿತ ನಾಗರಿಕರು ಮೇಲ್ವಿಚಾರಣೆ ಮಾಡಲು ವಿನಂತಿಸಿದರು. ಉಪವಿಭಾಗಗಳಿಗೆ ಗ್ರಾಮಗಳನ್ನು ಸಹ ಸೇರಿಸಲಾಯಿತು. ಪರಿಹಾರ ಸಮಿತಿಯವರು ಎಲ್ಲಾ ಮೊಹಲ್ಲಾಗಳಲ್ಲಿ ಮನೆಮನೆಗೆ ತೆರಳಿ ಔಷಧಿ, ಗಂಜಿ ಮತ್ತು ಬಡವರಿಗೆ ಹಣ, ಆಹಾರ ಧಾನ್ಯ ಮೊದಲಾದವುಗಳನ್ನು ವಿತರಿಸಿದರು. ಅಸ್ತಿತ್ವದಲ್ಲಿದ್ದ ಆಸ್ಪತ್ರೆಗಳ ಜೊತೆಗೆ ಐದು ಯುನಾನಿ ಮತ್ತು ಆಯುರ್ವೇದ ಚಿಕಿತ್ಸಾಲಯಗಳನ್ನು ತೆರೆಯಲಾಯಿತು. ಮಹಾರಾಜರು ಪರಿಹಾರಕಾರ್ಯಗಳ ಸರಬರಾಜಿಗಾಗಿ ಒಂದು ಲಾರಿ ಮತ್ತು ಕಾರನ್ನು ನೀಡಿದರು. ಸ್ಮಶಾನಗಳಲ್ಲಿ ದೈನಂದಿನ ಅಗತ್ಯಕ್ಕೆ ತಕ್ಕಷ್ಟು ಇಂಧನ ದಾಸ್ತಾನನ್ನು ಸಹ ಇಟ್ಟು ಬಡವರಿಗೆ ಉಚಿತವಾಗಿ ನೀಡಲಾಯಿತು.[15]

ವಸ್ತು ಪ್ರದರ್ಶನದ ಕಟ್ಟಡವನ್ನು ತಾತ್ಕಾಲಿಕ ಆಸ್ಪತ್ರೆಗೆ ಬಳಸಿಕೊಳ್ಳುವಂತೆ ಹಾಗೂ ಕೃಷ್ಣರಾಜೇಂದ್ರ ಆಸ್ಪತ್ರೆಯಿಂದ ಅಗತ್ಯ ಪೀಠೋಪಕರಣ ಮತ್ತು ಸಲಕರಣೆಗಳನ್ನು ಬಳಸಿಕೊಳ್ಳಲು ಸಿದ್ಧವಾಗಿಟ್ಟುಕೊಳ್ಳುವಂತೆ ವೈದ್ಯರಿಗೆ ಸೂಚಿಸಲಾಯಿತು. ಹೀಗೆ ಮೈಸೂರು ನಗರ ಹಾಗೂ ಗ್ರಾಮೀಣ ಭಾಗದಲ್ಲಿ ರೋಗ

ನಿವಾರಣೆಗೆ ಸರ್ಕಾರ ತುರ್ತುಕ್ರಮ ಕೈಗೊಂಡಿತು.

ಮೈಸೂರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಆದೇಶ ಹೊರಡಿಸಿ 8 ಜಿಲ್ಲಾಧಿಕಾರಿಗಳು, ವೈದ್ಯಾಧಿಕಾರಿಗಳು, ನೈರ್ಮಲ್ಯ ಆಯುಕ್ತರು, ಜಿಲ್ಲಾ ಮಂಡಳಿಗಳ ಅಧ್ಯಕ್ಷರುಗಳು, ಪುರಸಭೆಯ ಅಧ್ಯಕ್ಷರುಗಳು, ತಾಲ್ಲೂಕುಗಳಲ್ಲಿ ಅಮಲ್ದಾರರು, ಉಪ ಅಮಲ್ದಾರರು ಹೋಬಳಿ ಮಟ್ಟದಲ್ಲಿ ಷೇಕ್ದಾರರುಗಳು ತಮ್ಮ ತಮ್ಮ ವ್ಯಾಪ್ತಿಗೆ ಒಳಪಟ್ಟ ಪ್ರದೇಶಗಳಲ್ಲಿ ಸಾಂಕ್ರಾಮಿಕರೋಗ ನಿವಾರಣಾ ಪರಿಹಾರಕಾರ್ಯಗಳನ್ನು ಕೈಗೊಳ್ಳಲು ಪರಿಹಾರಪಕ್ಷಗಳನ್ನು ಏರ್ಪಡಿಸಿ ಅವುಗಳ ಮೂಲಕ ಸೂಕ್ತ ಔಷಧಿ, ಕಾಂಜಿ ವಿತರಣೆ, ಮೊದಲಾದ ಪರಿಹಾರಕಾರ್ಯಗಳನ್ನು ಕಟ್ಟುನಿಟ್ಟಾಗಿ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಹಾಗೂ ಹಿರಿಯ ವೈದ್ಯಾಧಿಕಾರಿಗಳು ಸತತವಾಗಿ ನೈರ್ಮಲ್ಯ ಆಯುಕ್ತರೊಂದಿಗೆ ಸಂಪರ್ಕವಿಟ್ಟುಕೊಂಡು ಕೈಗೊಂಡಿರುವ ಪರಿಹಾರಕಾರ್ಯ, ರೋಗ ಪೀಡಿತರ ಹಾಗೂ ಮರಣ ಹೊಂದಿದವರ ಅಂಕಿ ಅಂಶಗಳನ್ನು ಅನುದಿನದ ವರದಿಗಳನ್ನು ಪಡೆದು ಪರಿಶೀಲಿಸಿ ವಾರಕ್ಕೆ ಒಂದು ಸಲ ಸಂಕ್ಷಿಪ್ತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಆದೇಶ ಹೊರಡಿಸಿದರು. ಅದರಂತೆ ಸಂಸ್ಥಾನಾದ್ಯಂತ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಯಿತು.

ಅದರಂತೆ ಚಿತ್ರದುರ್ಗ ಜಿಲ್ಲಾಧಿಕಾರಿಗಳು ಪ್ರವಾಸಕೈಗೊಂಡು ವೈಯಕ್ತಿಕ ತಪಾಸಣೆ ಮತ್ತು ವಿಚಾರಣೆಗಳಿಂದ ಅವರು ಕಂಡುಕೊಂಡ ಅಂಶವೆಂದರೆ ರೋಗಪೀಡಿತರನ್ನು ಸಾಮಾನ್ಯವಾಗಿ ಮನೆಗಳಲ್ಲಿ ಗಾಳಿ ಬೆಳಕು ಇಲ್ಲದ ಕತ್ತಲೆಯ ಕೋಣೆಗೆ ಸಾಗಿಸಲಾಗುತ್ತಿತ್ತು. ಈ ರೀತಿ ಮಾಡಿದ ಕಡೆಗಳಲ್ಲಿ ಹೆಚ್ಚಿನ ಸಾವುಗಳು ಸಂಭವಿಸಿದ್ದವು. ಗಾಳಿ ಬೆಳಕು ಬರುವ ಕಡೆಗಳಲ್ಲಿ ರೋಗಿಗಳನ್ನು ಇಟ್ಟಿದ್ದ ಕಡೆ ರೋಗಿಗಳು ಬೇಗನೆ ಚೇತರಿಸಿಕೊಂಡಿದ್ದು ಕಂಡು ಬಂದಿತ್ತು.[16] ಆದ್ದರಿಂದ ಜಿಲ್ಲಾಧಿಕಾರಿಗಳು ಭೇಟಿ ನೀಡಿದ ಸ್ಥಳಗಳಲ್ಲಿ ಜನರನ್ನು ಸೇರಿಸಿ ಜಾಗೃತಿ ಮೂಡಿಸುತ್ತಿದ್ದರು ಹಾಗೂ ಮೆಣಸು, ಓಂಕಾಳು ಮತ್ತು ಬೆಳ್ಳುಳ್ಳಿಗಳ ಪಾಕೇಟ್‌ಗಳನ್ನು ಜನರಿಗೆ ಉಚಿತವಾಗಿ ಹಂಚುತ್ತಿದ್ದ ಬಗ್ಗೆ ವರದಿ ಮಾಡಿದ್ದರು. ಕೆಲವುಕಡೆ ಇಂಗ್ಲೀಷ್ ಔಷಧಿಗಳನ್ನು ಸ್ವೀಕರಿಸಲು ಜನರು ಹಿಂಜರಿಯುತ್ತಿದದ್ದು ಸಹ ಕಂಡುಬರುತ್ತಿತ್ತು. 04–11–1918ರಂದು ದಿವಾನರಾದ ಸರ್.ಎಂ.ವಿಶ್ವೇಶ್ವರಯ್ಯನವರು ದಾವಣಗೆರೆಗೆ ಭೇಟಿ ನೀಡಿದಾಗ ಜಿಲ್ಲಾಧಿಕಾರಿಗಳು ಪರಿಹಾರಕಾರ್ಯಕ್ಕೆ ಹೆಚ್ಚುವರಿ ಹಣ ನೀಡುವಂತೆ ಕೋರಿಕೊಂಡಾಗ ದಿವಾನರು 5000 ರೂ.ಗಳನ್ನು ಹೆಚ್ಚುವರಿಯಾಗಿ ಮಂಜೂರು ಮಾಡಿದ್ದರು.[17] ಜಿಲ್ಲಾವಾರು ರೋಗಪೀಡಿತರು, ಚೇತರಿಸಿಕೊಂಡವರು ಹಾಗೂ ಮರಣಹೊಂದಿದವರ ಸಂಖ್ಯೆಗಳನ್ನು ಕಾಲಕಾಲಕ್ಕೆ ನೈರ್ಮಲ್ಯ ಆಯುಕ್ತರಿಗೆ ಸಲ್ಲಿಸಿರುವುದು ಆರೋಗ್ಯ ಇಲಾಖೆಯ ದಾಖಲೆಗಳಿಂದ ಕಂಡುಬರುತ್ತದೆ.

ಸಂಸ್ಥಾನದಲ್ಲಿ ಸುಮಾರು 8,83,491 ಜನ ರೋಗಕ್ಕೆ ಗುರಿಯಾಗಿ ಅದರಲ್ಲಿ 1,66,391 ಜನ ಮರಣ ಹೊಂದಿದ್ದು ಸಾಂಕ್ರಾಮಿಕ ರೋಗದ ತೀವ್ರತೆಯನ್ನು ತಿಳಿಸುತ್ತದೆ.[18]

ಹೀಗೆ ಸಂಸ್ಥಾನ ಸರ್ಕಾರವು ಸಾಂಕ್ರಾಮಿಕ ರೋಗ ನಿವಾರಣೆಗೆ ತುರ್ತು ಪರಿಹಾರ ಔಷಧಗಳ ವಿತರಣೆಗಾಗಿ ಒಟ್ಟು 1,13.866 ಮಂಜೂರು ಮಾಡಿ ಕ್ರಮ ಕೈಗೊಂಡಿರುವುದು ಹಾಗೂ ಅಭಿವೃದ್ದಿಗಾಗಿ ಖರ್ಚು ಮಾಡಬೇಕಾದ ಹಣವನ್ನು ಮಾರಕ ರೋಗ ನಿವಾರಣೆಗೆ ಬಳಸಿರುವುದು ಕಂಡುಬರುತ್ತದೆ.[19]

ಇನ್‌ಫ್ಲುಯೆಂಜಾ ಸಾಂಕ್ರಾಮಿಕ ರೋಗದಿಂದ ಹಳ್ಳಿಗಳಲ್ಲಿ ಜನರು ನೊಣಗಳಂತೆ ಸಾಯುತ್ತಿದ್ದರೆಂದು 06–11–1918 ಕಾನಡಾ ವೃತ್ತಾ ಪತ್ರಿಕೆಯು ವರದಿ ಮಾಡಿದೆ. ಜನರು ದೇವರ ಮೇಲೆ ಭಾರಹಾಕಿ ಕುಳಿತರೆ ಆಗದು. ಯುವಕರು ಸ್ವಯಂ ಸೇವಕರಾಗಿ ಸೇವೆಮಾಡಲು ಸಿದ್ದರಾಗಬೇಕು. ಸೇವೆಯು ಹಗಲು ಇರುಳು ತಪ್ಪಸ್ಸಿನಂತೆ ನಡೆಯಬೇಕು. ಪುರಸಭೆಗಳು, ಲೋಕಲ್ ಬೋರ್ಡ್‌ಗಳು ಪರಿಹಾರ ಕಾರ್ಯದಲ್ಲಿ ತೊಡಗಲು ಸೂಕ್ತ ಸಮಯ ಮನೆ ಮನೆಗಳಿಗೆ ಔಷಧಿ ಹಂಚಬೇಕು. ನಗರಗಳಿಗಿಂತ ಹಳ್ಳಿಗಳಿಗೆ ಔಷಧಿಗಳನ್ನು ಹೆಚ್ಚಿಗೆ ಹಂಚಬೇಕು.[20] ಮೊದಲಾಗಿ ವರದಿ ಮಾಡಿರುವುದು ಸಾಂಕ್ರಾಮಿಕ ರೋಗದ ತೀವ್ರತೆಗೆ ಸಾಕ್ಷಿಯಾಗಿದೆ.

ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರು ಅಕ್ಟೋಬರ್ 6, 1918ರಲ್ಲಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾತನಾಡುತ್ತಾ ಈ ಸಾಂಕ್ರಾಮಿಕರೋಗ ರಾಜ್ಯವನ್ನೆಲ್ಲಾ ಆವರಿಸಿ ಜನರನ್ನು ಪೀಡಿಸಿದಾಗ ನಮ್ಮಲ್ಲಿ ಇರುವ ವೈದ್ಯಕೀಯ ವ್ಯವಸ್ಥೆಯ ಪುನರ್ ರಚನೆಯ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ತಿಳಿಸಿದರಲ್ಲದೆ ಸಂಸ್ಥಾನದಲ್ಲಿ 179 ವೈದ್ಯಕೀಯ ಸಂಸ್ಥೆಗಳಿದ್ದು, 169 ಚ.ಕಿ.ಗೆ ಒಂದರಂತೆ ಹಾಗೂ 32,800 ಜನರಿಗೆ ಒಂದು ಆಸ್ಪತ್ರೆ ಇರುವುದಾಗಿ ತಿಳಿಸಿರುವುದು[21] ಸುಮಾರು 16,000ಕ್ಕೂ ಹೆಚ್ಚು ಹಳ್ಳಿಗಳಿಂದ ಕೂಡಿದ ಸಂಸ್ಥಾನದಲ್ಲಿ ಇನ್‌ಫ್ಲುಯೆಂಜಾ ಸಾಂಕ್ರಾಮಿಕರೋಗಕ್ಕೆ ಸಿಲುಕಿದ ಜನರು ಸರ್ಕಾರ ಕೈಗೊಂಡ ಪರಿಹಾರಗಳ ನಡುವೆಯೂ ಎಂಥಃ ಗಂಭೀರ ಸಂಕಷ್ಟಕ್ಕೆ ಸಿಲುಕಿ ನರಳುವಂತಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

**ಉಪಸಂಹಾರ:** ಮೊದಲ ಮಹಾಯುದ್ಧ ಕಾಲದಲ್ಲಿ ಪ್ರಪಂಚದ ಬಹುತೇಕ ದೇಶಗಳನ್ನು ಕಾಡಿದ ಇನ್‌ಫ್ಲುಯೆಂಜಾ ಸಾಂಕ್ರಾಮಿಕರೋಗವು 1918ರ ಜೂನ್ ಅಂತ್ಯದಲ್ಲಿ ಬೆಂಗಳೂರು ಮತ್ತು ಮೈಸೂರು ನಗರದಲ್ಲಿ ಹರಡಿ ಸೆಪ್ಟಂಬರ್‌ನಲ್ಲಿ ಉಲ್ಬಣಗೊಂಡ ಸಾಂಕ್ರಾಮಿಕರೋಗದ ಎರಡನೆಯ ಅಲೆಯು ಇಡೀ ಸಂಸ್ಥಾನವನ್ನು

ಆಪೋಷಣೆ ಮಾಡಿತು. ಸುಮಾರು 8,83,491 ಜನರು ಮಾರಕರೋಗದ ದಾಳಿಗೆ ಒಳಗಾಗಿ 1,66,391 ಜನರನ್ನು ಬಲಿ ತೆಗೆದುಕೊಂಡಿತು. ಕೆಲವೇ ಕೆಲವು ತಿಂಗಳುಗಳಲ್ಲಿ ಈ ರೋಗದ ದಾಳಿಗೆ ಸಿಲುಕಿ ಮೈಸೂರು ಸಂಸ್ಥಾನದ ಜನತೆ ನಲುಗಿ ಹೋದರು. ನಾಲ್ವಡಿ ಕೃಷ್ಣರಾಜ ಒಡೆಯರ ನೇತೃತ್ವದ ಸರ್ಕಾರ ಎಂಟು ಜಿಲ್ಲಾಧಿಕಾರಿಗಳು, ವೈದ್ಯಾಧಿಕಾರಿಗಳು, ಅಧೀನ ಅಧಿಕಾರಿಗಳ ಸಹಯೋಗದೊಂದಿಗೆ ರೋಗ ನಿವಾರಣೆಗೆ ಸಮರೋಪಾದಿಯಲ್ಲಿ ಪರಿಹಾರಕಾರ್ಯ, ಚಿಕಿತ್ಸೆ, ಔಷಧಿಗಳ ವಿತರಣೆ, ತುರ್ತು ಚಿಕಿತ್ಸಾಲಯಗಳ ಸ್ಥಾಪನೆ, ಹೆಚ್ಚುವರಿ ಸಿಬ್ಬಂದಿಗಳ ನೇಮಕ ಮೊದಲಾದ ಕಾರ್ಯಕೈಗೊಂಡು ಮಾರಕರೋಗ ನಿವಾರಣೆಗೆ ಶ್ರಮಿಸಿದ ಪರಿ ನಿಜಕ್ಕೂ ಶ್ಲಾಘನೀಯವಾದುದ್ದು. ಭಾರತದಾದ್ಯಂತ ಹಿಂದೆಂದೂ ಕಂಡು ಕೇಳ ರಿಯದ ರೀತಿಯಲ್ಲಿ ಸುಮಾರು 6 ಮಿಲಿಯನ್‌ಗಿಂತ ಅಧಿಕ ಜನರು ಈ ಸಾಂಕ್ರಾಮಿಕರೋಗಕ್ಕೆ ಬಲಿಯಾದರೆಂದರೆ ಜನಸಮುದಾಯವು ಎಷ್ಟು ಭೀಕ್ಷಣ ಸಂಕಷ್ಟಕ್ಕೆ ಗುರಿಯಾಗಿದ್ದರೆಂದು ಅರಿವಾಗುತ್ತದೆ. ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ ಕ್ಷೇತ್ರಗಳಲ್ಲಿ ಅಗಾಧ ಪ್ರಗತಿಯನ್ನು ಸಾಧಿಸಿದ ಅತ್ಯಾಧುನಿಕ ಪ್ರಪಂಚವನ್ನು ಕೋವಿಡ್–19 ಸಾಂಕ್ರಾಮಿಕರೋಗವು ಹೇಗೆ ತಲ್ಲಣಗೊಳಿಸಿ ಮಾನವ ಜೀವನವನ್ನು ಅಸ್ತವ್ಯಸ್ತಗೊಳಿಸಿತು ಎಂಬುದನ್ನು ಜನಸಮುದಾಯವು ಮರೆತಿಲ್ಲ. ಜಗತ್ತಿನ ಅತ್ಯಂತ ಮುಂದುವರೆದ ರಾಷ್ಟ್ರಗಳೂ ಕರೋನ ಮಹಾಮಾರಿಯ ಮುಂದೆ ಮಂಡಿ ಯೂರಿ ನಿಸ್ಸಹಾಯಕವಾಗಿ ಜನಗಳು ಹುಳಉಪ್ಪಟೆಯಂತೆ ಬಲಿಯಾದುದ್ದು ವಿಶ್ವದ ಜನಸಮುದಾಯ ಅನುಭವಿಸಿದ ಸಂಕಷ್ಟ ಸಾವುನೋವು ಅಗಾಧವಾದುದೆಂದರೆ, ಆಧುನಿಕ ವೈದ್ಯಕೀಯ ಸೌಕರ್ಯ, ಚಿಕಿತ್ಸೆ, ಔಷಧಗಳು ಅಷ್ಟಾಗಿ ಲಭ್ಯವಿಲ್ಲದಿದ್ದಾಗ ಬಂದೆರಗಿದ ಇನ್‌ಫ್ಲುಯೆಂಜಾ ಮಾರಕರೋಗವು ಮೈಸೂರು ಸಂಸ್ಥಾನದಲ್ಲಿ ಉಂಟು ಮಾಡಿದ ಸಂಕಷ್ಟಗಳು ನಿಜಕ್ಕೂ ಊಹೆಗೂ ನಿಲಕ್ಕದ್ದು ಎಂದರೆ ತಪ್ಪಾಗಲಾರದು.

**ಅಡಿಟಿಪ್ಪಣಿಗಳು:**


1. ನಾಥನ್ ಆರ್. (1898). ಪ್ಲೇಗ್ ಇನ್ ಇಂಡಿಯಾ 1896–97 (ಸಂಪುಟ–2). ಸೆಂಟ್ರಲ್ ಪ್ರಿಂಟಿಂಗ್ ಆಫೀಸ್. ಸಿಮ್ಲಾ.
2. General and Revenur Secretariat. Medical File No. 56c-1918-19. Part-II (ಕರ್ನಾಟಕರಾಜ್ಯಪತ್ರಾಗಾರ).
3. ಅದೇ
4. Medical File No. 56'O'-1918-19 (ಕರ್ನಾಟಕರಾಜ್ಯಪತ್ರಾಗಾರ).
5. ಅದೇ
6. ಮೆಡಿಕಲ್ ಫೈಲ್ ನಂ. 56ಖ.–1918–19 Serial No. 52, 84 to 95 (ಕರ್ನಾಟಕರಾಜ್ಯಪತ್ರಾಗಾರ).
7. ಮೆಡಿಕಲ್ ಫೈಲ್ ನಂ. 56ಗ.–1918–19 (ಕರ್ನಾಟಕರಾಜ್ಯಪತ್ರಾಗಾರ).
8. ಮೆಡಿಕಲ್ ಫೈಲ್ ನಂ. 56ಖ.–1918–19 (ಕರ್ನಾಟಕರಾಜ್ಯಪತ್ರಾಗಾರ).
9. ಅದೇ
10. ಮೆಡಿಕಲ್ ಫೈಲ್ ನಂ. 56ಖ.–1918–19 (ಕರ್ನಾಟಕರಾಜ್ಯಪತ್ರಾಗಾರ).
11. ಅದೇ
12. ಅದೇ
13. ಅದೇ
14. ಮೆಡಿಕಲ್ ಫೈಲ್ ನಂ. 56ಖ.–1918–19 (ಕರ್ನಾಟಕರಾಜ್ಯಪತ್ರಾಗಾರ).
15. ಮೆಡಿಕಲ್ ಫೈಲ್ ನಂ. 56ಐ.–1918–19 (ಕರ್ನಾಟಕರಾಜ್ಯಪತ್ರಾಗಾರ).
16. ಮೆಡಿಕಲ್ ಫೈಲ್ ನಂ. 56ಖ.–1918–19
17. ಅದೇ
18. ಅದೇ
19. ಅದೇ
20. ಕಾನಡಾ ವೃತ್ತಪತ್ರಿಕೆ. (6–11–1918). ಕರ್ನಾಟಕ ರಾಜ್ಯ ಪತ್ರಾಗಾರ. ವಿಧಾನಸೌಧ. ಬೆಂಗಳೂರು.
21. ಅಡ್ರಸ್ ಆಫ್ ದಿ ದಿವಾನ. ರೆಪ್ರೆಸೆಂಟೆಟೀವ್ ಅಸೆಂಬ್ಲಿ. ದಸರಾ ಸೆಸೆನ್ 1918 ಅಕ್ಟೋಬರ್–6. ಪುಟ–12

**ಪ್ರಾಥಮಿಕ ಆಕರಗಳು:**


1. General and Revenue Secretariat. Madical File No: 56C-1918-19. Part – II. ಕರ್ನಾಟಕ ರಾಜ್ಯ ಪತ್ರಾಗಾರ. ವಿಧಾನಸೌಧ, ಬೆಂಗಳೂರು.
2. General and Revenue Secretariat. Madical File No: 56'O'-1918-19. Part – II. ಕರ್ನಾಟಕ ರಾಜ್ಯ ಪತ್ರಾಗಾರ. ವಿಧಾನಸೌಧ, ಬೆಂಗಳೂರು.
3. General and Revenue Secretariat. Madical File No: 56U-1918-19. Part – II. ಕರ್ನಾಟಕ ರಾಜ್ಯ ಪತ್ರಾಗಾರ. ವಿಧಾನಸೌಧ, ಬೆಂಗಳೂರು.
4. General and Revenue Secretariat. Madical File No: 56R-1918-19. Part – II. ಕರ್ನಾಟಕ ರಾಜ್ಯ ಪತ್ರಾಗಾರ. ವಿಧಾನಸೌಧ, ಬೆಂಗಳೂರು.
5. ಕಾನಡ ವೃತ್ತ ಪತ್ರಿಕೆ. ಕರ್ನಾಟಕ ರಾಜ್ಯ ಪತ್ರಾಗಾರ. ವಿಧಾನಸೌಧ. ಬೆಂಗಳೂರು.


**ಪರಾಮರ್ಶನ ಗ್ರಂಥಗಳು:**


1. ನಾಥನ್ ಆರ್. (1898). ಪ್ಲೇಗ್ ಇನ್ ಇಂಡಿಯಾ 1896–97. ಸೆಂಟ್ರಲ್ ಪ್ರಿಂಟಿಂಗ್ ಆಫೀಸ್. ಸಿಮ್ಲಾ.
2. ನಾರಾಯಣರಾವ್ ಎ. ಎಸ್. (1978). ಮೋಕ್ಷ ಗುಂಡಂ ವಿಶ್ವೇಶ್ವರಯ್ಯ ಜೀವನ ಸಾಧನೆ. ಅಂಕಿತ ಪುಸ್ತಕ. ಬೆಂಗಳೂರು.
3. ವೆಂಕಟರಾಮಯ್ಯ ಸಿ. ಕೆ. (1941). ಆಳಿದ ಮಹಾಸ್ವಾಮಿಯವರು ದಿವಂಗತರಾದ ಶ್ರೀಮನ್ಮಹಾರಾಜ ಶ್ರೀಮನ್ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಒಡೆಯರವರ ಜೀವನ ಚರಿತ್ರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.